ಸರ್ಕಾರವು ಇದರ ಬಗ್ಗೆ ವಿಶೇಷ ಗಮನವನ್ನು ಹರಿಸಿ ಈ ಕಾರ್ಯದ ಬಗ್ಗೆ ಟೆಂಡರುಗಳನ್ನು ಕರೆದು ಈ ಕೆಲಸದ ಮೌಲ್ಯ ಮಾಪನಕ್ಕಾಗಿ ರಚಿಸಲ್ಪಟ್ಟ ಸಮಿತಿಯ ಅಭಿಪ್ರಾಯದಂತೆ ಈ ಕೆಲಸವನ್ನು ಸುಮಾರು ೧೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈಗಾಗಲೇ ಮೆಸರ್ಸ್ ಬೋಸ್ ಡ್ರೆಜಿಂಗ್ ಸರ್ವಿಸಸ್ ಲಿಮಿಟೆಡ್ (ಖಾಸಗಿ ಸಂಸ್ಥೆ) ಇವರಿಗೆ ಒಪ್ಪಿಸಿದೆ. ಈ ಬಗ್ಗೆ ಕರಾರು ಪತ್ರಗಳು ಪೂರ್ಣಗೊಂಡಿದ್ದು ಮೊಬಲೈಜೇಷನ್ ಅಡ್ವಾನ್ಸ್‌ಗಾಗಿ ೩ ಲಕ್ಷ ರೂಪಾಯಿಗಳನ್ನು ಪಾವತಿ ಮಾಡಲಾಗಿದೆ. ಇದೇ ಕಂಪನಿಗೆ ಮಂಗಳೂರು ಮೀನುಗಾರಿಕೆ ವಾರ್ಫ್‌ನಲ್ಲಿ ಹೂಳೆತ್ತುವ ಕೆಲಸವನ್ನೂ ಸಹ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪಹಿಸಲಾಗಿದೆ. ಇವರು ಯಂತ್ರಗಳನ್ನು ತಂದು ಜೋಡಿಸುತ್ತಾ ಇದ್ದಾರೆ. ಮತ್ತು ಮೀನುಗಾರಿಕೆ ವಾರ್ಫ್‌ಗೆ ಸಂಬಂಧಿಸಿದ ಹೂಳೆತ್ತುವ ಕಾರ್ಯವನ್ನು ಸಧ್ಯದಲ್ಲೇ ಆರಂಭಿಸಲಾಗುತ್ತದೆ. ಇನ್ನು ೧೦-೧೫ ದಿವಸಗಳಲ್ಲಿ ಆ ಕೆಲಸ ಪ್ರಾರಂಭವಾಗಬಹುದು.

ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಹೂಳೆತ್ತುವ ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಲಸವನ್ನು ಈಗಾಗಲೇ ಮೆಸರ್ಸ್ ಆಂಧ್ರ ಸಿವಿಲ್ ಕನ್‌ಸ್ಟ್ರಕ್ಷನ್ಸ್ ಕಂಪನಿ, ಮದ್ರಾಸ್ ಇವರಿಗೆ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಹಿಸಲಾಗಿದ್ದು ಇವರಿಗೆ ೬ ಲಕ್ಷ ರೂಪಾಯಿಗಳನ್ನು ಮೊಬಿಲೈಜೇಷನ್ ಅಡ್ವಾನ್ಸ್ ಆಗಿ ಪಾವತಿ ಮಾಡಲಾಗಿದೆ, ಇವರೂ ಸಹ ಹೂಳೆತ್ತುವ ಕೆಲಸಕ್ಕಾಗಿ ಯಂತ್ರಗಳನ್ನು ಜೋಡಿಸುತ್ತಾ ಇದ್ದಾರೆ, ಸಧ್ಯದಲ್ಲೇ ಹೂಳೆತ್ತುವ ಕಾರ್ಯವನ್ನು ಪ್ರಾರಂಭಿಸಲಾಗುವುದು.

೧೦ ಪಿ. ಎಂ.

5. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ವೇತನವನ್ನು ಹೆಚ್ಚಿಸುವುದಂ ಮತ್ತು ಅವರನ್ನು ಖಾಯಂಗೊಳಿಸಲಾಗುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು)— ಅಧ್ಯಕ್ಷರೇ, ಭಾವೀ ಜನಾಂಗದ ಭವಿಷ್ಯತ್ತನ್ನು ರೂಪಿಸುವ ಪವಿತ್ರ ಕಾರ್ಯದ ರೂವಾರಿಗಳೆಂದು ಶಿಕ್ಷಕರನ್ನು ಹೊಗಳುವುದಂ ಮಾತ್ರ ನಿರಂತರವಾಗಿ ನಡೆದಿದೆಯೇ ಹೊರತು, ಖಾಲಿ ಬಿದ್ದ ಶಿಕ್ಷಕರ ಸ್ಥಾನಗಳನ್ನು ತುಂಬಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಗುತ್ತಿಗೆ ಶಿಕ್ಷಕರು, ಅಲ್ಪಕಾಲಿಕ ಶಿಕ್ಷಕರನ್ನು ನೇಮಿಸಿಕೊಂಡು ದುಡಿಮೆಗೆ ತಕ್ಕ ವೇತನ ನೀಡದೆ, ಶಿಕ್ಷಕ ವೃತ್ತಿಗೇ ಅನ್ಯಾಯವೆಸಗುತ್ತಿರುವುದು ಸರಿಯಲ್ಲ. ಆದರಲ್ಲೂ ಬುನಾದಿಯಲ್ಲೇ ಮಕ್ಕಳ ಭವಿಷ್ಯ ರೂಪಿಸುವ ಪ್ರಾಥಮಿಕ ಶಾಲಾ ಶಿಕ್ಷಕರ ಬವಣೆ–ಕಡಿಮೆಜನಕವಾದುದು. ಗುತ್ತಿಗೆ ಆಧಾರದಲ್ಲಿ ನೇಮಿಸಲ್ಪಟ್ಟ ಪದವಿ ಕಾಲೇಜು, ಪದವಿ ಪೂರ್ವ ಕಾಲೇಜು, ಪ್ರೌಢ ಶಾಲಾ ಶಿಕ್ಷಕರಿಗೆ ಪರಿಷ್ಕೃತ ವೇತನ, ವೇತನ ಬಾಕಿ ಮಂಜೂರಾಗಿದ್ದರೆ, ಈ ಸವಲತ್ತು ಸಹ ಪ್ರಾಥಮಿಕ ಶಾಲಾ ಗುತ್ತಿಗೆ ಶಿಕ್ಷಕರಿಗಿಲ್ಲ. ಈ ದುಬಾರಿ ದಿನಗಳಲ್ಲೂ ಅವರ ಪಾಲಿಗೆ ತಿಂಗಳಿಗೆ ರೂ ೫೪೦ ಮಾತ್ರ ಲಭ್ಯ, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಖಾಯಂಗೊಳಿಸಬೇಕು. ಅದಕ್ಕೆ ಸಮಯಾವಕಾಶ ಬೇಕಿದ್ದಲ್ಲಿ ಆತನಕ ವೇತನವನ್ನಾದರೂ ಪರಿಷ್ಕರಿಸಬೇಕು. ವಿದ್ಯಾರ್ಥಿ ಅಧ್ಯಾಪಕ ನಿವೃತ್ತಿಗನುಗುಣವಾಗಿ ಶಿಕ್ಷಕರನ್ನು ನೇಮಿಸಬೇಕು ಎಂದು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎಂ, ರಘುಪತಿ. —ಅಧ್ಯಕ್ಷರೇ ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ,

6. ಸ್ವಾತಂತ್ರ್ಯೋತ್ಸವ ಮುಂತಾದ ರಾಷ್ಟ್ರೀಯ ಸಮಾರಂಭಗಳಲ್ಲಿ ಧ್ವಜಾರೋಹಣ ಮಾಡುವ ಅಧಿಕಾರವನ್ನು ಶಾಸಕರಿಗೆ ನೀಡಲ್ಪಿಸುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) — ರಾಷ್ಟ್ರಾದ್ಯಂತ ಆಚರಿಸಲಾಗುತ್ತಿರುವ ಸ್ವಾತಂತ್ರ್ಯೋತ್ಸವ ಮೊದಲಾದ ರಾಷ್ಟ್ರೀಯ ಸಮಾರಂಭಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡುವ ಗೌರವಯುತ ಅವಕಾಶವನ್ನು ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲಿ ಸರಕಾರಿ ನೌಕರರುಗಳಾದ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಿದ್ದು ಇಂತಹ ಸಮಾರಂಭಗಳಲ್ಲಿ ರಾಷ್ಟ್ರದ ಸಾರ್ವಭೌಮರಾದ ಜನತೆಯಿಂದ ಆಯ್ಕೆಯಾದ ಜನತಾ ಪ್ರತಿನಿಧಿಗಳಾದ ಲೋಕಸಭಾ ಮತ್ತು ಶಾಸನಸಭಾ ಸದಸ್ಯರುಗಳು ಇಂತಹ ಸಮಾರಂಭಗಳಲ್ಲಿ ಮೂಕ ಪ್ರೇಕ್ಷಕರಂತೆ ಭಾಗವಹಿಸಬೇಕಾಗಿತ್ತು